ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್ - ಚುನಾವಣೆ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ    ದಿನಾಂಕ : DATE : 23/6/202

# ಪರಿಷತ್‌ಗೆ 7 ಜನ ಅವಿರೋಧ ಆಯ್ಕೆ

## ಬಿಜೆಪಿಯ 4, ಕಾಂಗ್ರೆಸ್‌ನ 2, ಜೆಡಿಎಸ್‌ನ ಒಬ್ಬರು ಪ್ರವೇಶ

ಉ.ವಾ 23/6/20

ಬೆಂಗಳೂರು: ರಾಜ್ಯ ವಿಧಾನಸಭೆಯಿಂದ ವಿಧಾನ ಪರಿಷತ್‌ಗೆ ನಡೆದ ಚುನಾವಣೆಯಲ್ಲಿ ಏಳೂ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಸೋಮವಾರ ನಾಮಪತ್ರ ವಾಪಸ್ ಪಡೆಯಲು ಕೊನೆಯ ದಿನವಾಗಿದ್ದರಿಂದ ಚುನಾವಣಾಧಿಕಾರಿಯೂ ಆಗಿರುವ ವಿಧಾನಸಭೆ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ಏಳು ಜನ ಅಭ್ಯರ್ಥಿಗಳ ಅವಿರೋಧ ಆಯ್ಕೆ ಘೋಷಣೆ ಮಾಡಿದರು. ಬಿಜೆಪಿಯ ಸುನಿಲ್ ವಲ್ಯಾಪುರೆ, ಪ್ರತಾಪ್ ಸಿಂಹ ನಾಯಕ್, ಎಂ.ಟಿ.ಬಿ. ನಾಗರಾಜ್ ಹಾಗೂ ಆರ್. ಶಂಕರ್, ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್ ಹಾಗೂ ನಸೀರ್ ಅಹಮದ್ ಮತ್ತು ಜೆಡಿಎಸ್‌ನ ಗೋವಿಂದರಾಜು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.



**ಆಯ್ಕೆ ಆದ 7 ಮಂದಿ**


ನಾಗರಾಜ್


ವಲ್ಯಾಪುರೆ


ಆರ್. ಶಂಕರ್


ಪ್ರತಾಪ್ ನಾಯಕ್


ಹರಿಪ್ರಸಾದ್


ನ. ಅಹಮದ್


ಗೋವಿಂದರಾಜು

❝ ನಾಯಕರ ನಿರೀಕ್ಷೆಯಂತೆ ಸಕ್ರಿಯವಾಗಿ ಕಲಾಪದಲ್ಲಿ ಪಾಲ್ಗೊಂಡು ಜನರ ಸಮಸ್ಯೆಗಳಿಗೆ ನ್ಯಾಯ ಕೊಡಿಸುತ್ತೇನೆ.

• ನಸೀರ್ ಅಹಮದ್,
ನೂತನ ವಿಧಾನ ಪರಿಷತ್ ಸದಸ್ಯ.

❝ ನೂರಕ್ಕೆ ನೂರರಷ್ಟು ಸಚಿವ ಸ್ಥಾನ ನಮಗೆ ಸಿಗುತ್ತದೆ. ಸಿಎಂ ಬಿಎಸ್‌ವೈ ಅವರು ನಮ್ಮನ್ನು ಯಾವಾಗ ಬೇಕಾದರೂ ಸಚಿವರನ್ನಾಗಿ ಮಾಡಬಹುದು.

• ಆರ್.ಶಂಕರ್,
ನೂತನ ವಿಧಾನ ಪರಿಷತ್ ಸದಸ್ಯ.

❝ ನಾವು ಕೊರೊನಾ ಸಮಯದಲ್ಲಿಯೇ ಪರಿಷತ್ ಸದಸ್ಯರಾದವರು. ಅನರ್ಹರಾಗಿದ್ದವರು ಅರ್ಹರಾಗಿ ವಿಧಾನಪರಿಷತ್ ಸದಸ್ಯರಾಗಿದ್ದೇವೆ. ಸಚಿವ ಸ್ಥಾನದ ಬಗ್ಗೆ ಮುಖ್ಯಮಂತ್ರಿ ಯಡಿಯೂರಪ್ಪ, ಪಕ್ಷದ ವರಿಷ್ಠರು ತೀರ್ಮಾನ ಮಾಡುತ್ತಾರೆ.

• ಎಂಟಿಬಿ ನಾಗರಾಜ್, ನೂತನ ವಿಧಾನ ಪರಿಷತ್ ಸದಸ್ಯ.